122 (250) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯ ಸರ್ಕಾರವು ನೂತನ ಕೃಷಿ ನೀತಿಯನ್ನು ಯಾವಾಗ ಪ್ರಕಟಿಸಿದೆ ; ಈ ನೀತಿಯನ್ನು ಎಂದಿನಿಂದ ಜಾರಿಗೆ ತರಲಾಗುವುದು ; ಇದರ ಮುಖ್ಯಾಂಶಗಳೇನು ;

ಆ) ಈ ಕೃಷಿ ನೀತಿಯನ್ನು ಸಮಗ್ರವಾಗಿ ಅನುಷ್ಠಾನಗೊಳಿಸಲು ತಗಲುವ ವೆಚ್ಚವೆಷ್ಟು ;

ಇ) ಇದಕ್ಕಾಗಿ ಆಯವ್ಯಯದಲ್ಲಿ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ ;

ಈ) ಕಳೆದ ಒಂದು ವರ್ಷದಲ್ಲಿ ಇಲಾಖೆಯಿಂದ ಈ ದಿಸೆಯಲ್ಲಿ ಎಷ್ಟು ಹಣವನ್ನು ಕೃಷಿ ಇಲಾಖೆಯ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಗಿದೆ ; (ವಿವರಗಳನ್ನು ಒದಗಿಸುವುದು) ;

ಉ) ರೈತರಿಗೆ ಆತ್ಮ ಹತ್ಯೆಯನ್ನು ತಡೆಗಟ್ಟಲು ನೂತನ ಕೃಷಿ ನೀತಿಯಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ;

ಊ) ನೂತನ ಕೃಷಿ ನೀತಿಯು ನಿರಂತರವಾಗಿ ಬರಗಾಲಕ್ಕೆ ತುತ್ತಾಗುತ್ತಿರುವ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷವಾಗಿ ಬೀದರ್ ಜಿಲ್ಲೆಗೆ ಯಾವ ರೀತಿಯಲ್ಲಿ ಸಹಕಾರಿಯಾಗಿದೆ ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು):

ಅ) ರಾಜ್ಯದ ನೂತನ ಕೃಷಿ ನೀತಿಯನ್ನು ಡಿಸೆಂಬರ್ 2006 ರಲ್ಲಿ ಪ್ರಕಟಿಸಲಾಗಿದ್ದು, ಇದನ್ನು 2007–08ನೇ ಸಾಲಿನಿಂದ ಜಾರಿಗೆತರಲು ಉದ್ದೇಶಿಸಲಾಗಿದೆ. ಈ ನೀತಿಯ ಮುಖ್ಯಾಂಶಗಳು ಇಂತಿವೆ.

1. ಮಣ್ಣಿನ ಆರೋಗ್ಯ ಕಾಪಾಡುವುದು

2. ಮಣ್ಣು ಮತ್ತು ನೀರಿನ ಸಂರಕ್ಷಣೆಯೊಂದಿಗೆ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ

3. ಕೃಷಿ ಸಾಲ ಒದಗಿಸುವುದು

4. ಕೊಯ್ಲಿನೋತ್ತರ ಸಮಗ್ರ ನಿರ್ವಹಣೆ 331 331 331 331

5. ಪ್ರಯೋಗಾಲಯದಿಂದ ರೈತರ ಜಮೀನಿಗೆ ವೇಗದಲ್ಲಿ ತಾಂತ್ರಿಕತೆ ವರ್ಗಾವಣೆ

6. ಒಂದು ದಶಕದಲ್ಲಿ ಕೃಷಿ ಉತ್ಪಾದನೆ ಮತ್ತು ರೈತರ ನಿವ್ವಳ ಆದಾಯವನ್ನು ದ್ವಿಗುಣಗೊಳಿಸುವುದು

7. ಶೇ. 4.5ರ ವಾರ್ಷಿಕ ಬೆಳವಣಿಗೆ ಸಾಧಿಸುವುದು

8. ಉತ್ಪಾದನೆ ಆಧಾರಿತ ತಂತ್ರಜ್ಞಾನದಿಂದ ಬೇಡಿಕೆ ಆಧಾರಿತ ತಂತ್ರಜ್ಞಾನದ ಕಡೆಗೆ ಬದಲಾಯಿಸುವುದು.

ಆ) ಈ ನೀತಿಯ ಅನುಷ್ಠಾನಕ್ಕಾಗಿ ತಗಲುವ ವೆಚ್ಚವನ್ನು ಅಂದಾಜು ಮಾಡಲಾಗುತ್ತಿದೆ.

ಇ) ಹತ್ತು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುವ ಈ ನೀತಿಗೆ ಅಗತ್ಯವಿರುವ ಅನುದಾನವನ್ನು ಸಂಬಂಧಪಟ್ಟ ಇಲಾಖೆಯ ವಾರ್ಷಿಕ ಆಯವ್ಯಯದಲ್ಲಿ ಮೀಸಲಿಸಲು ಉದ್ದೇಶಿಸಲಾಗಿದೆ.

ಈ) ಕೃಷಿ ನೀತಿಯನ್ನು 2007–08ನೇ ಸಾಲಿನಿಂದ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುವುದರಿಂದ ಈ ಸಾಲಿನಲ್ಲಿ ಇದಕ್ಕಾಗಿ ಯಾವುದೇ ಅನುದಾನವನ್ನು ಮೀಸಲಿಡಲಾಗಿರುವುದಿಲ್ಲ.

ಉ) ರಾಜ್ಯದ ಹೊಸ ಕೃಷಿ ನೀತಿಯು ರೈತರ ಅಭಿವೃದ್ಧಿಗೆ ಪೂರಕವಾಗಿರುವುದರಿಂದ ಇದು ರೈತರ ಆತ್ಮಹತ್ಯೆಯನ್ನು ತಡೆಯುವ ಸಾಧನವಾಗಿದೆ ಎಂದು ಭಾವಿಸಲಾಗಿದೆ.

ಊ) ರಾಜ್ಯದ ನೂತನ ಕೃಷಿ ನೀತಿಯ ಬೀದರ್ ಜಿಲ್ಲೆಯೂ ಸೇರಿದಂತೆ ರಾಜ್ಯದ ಎಲ್ಲಾ ಭಾಗಗಳ ಅಭಿವೃದ್ಧಿಗೆ ಸಹಕಾರಿಯಾಗಲಿದೆ.

123 (251) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಕೇಂದ್ರಗಳ ಸಂಖ್ಯೆ ಎಷ್ಟು ; ಹಾಗೂ ಇವು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತವೆ ;

ಆ) ಈ ಸಂಸ್ಥೆಗಳ ಕಾರ್ಯಚಟುವಟಿಕೆಗಳೇನು ;

ಇ) ಇವುಗಳ ನಿರ್ವಹಣೆಗೆ ಕಳೆದ ಒಂದು ವರ್ಷದಲ್ಲಿ ವೆಚ್ಚ ಮಾಡಿರುವ ಹಣವೆಷ್ಟು;

ಈ) ಸಂಶೋಧನಾ ಕೇಂದ್ರಗಳಿಂದ ಯಾವ ಯಾವ ಹೊಸ ಸಂಶೋಧನೆಗಳನ್ನು ಕೈಗೊಳ್ಳಲಾಗಿದೆ ;

ಉ) ಈ ಸಂಸ್ಥೆಗಳಿಗೆ ಸೇರಿದ ಜಾಗದ ವಿಸ್ತೀರ್ಣವೆಷ್ಟು ಹಾಗೂ ಈ ಜಾಗದ ಇಂದಿನ ಮಾರುಕಟ್ಟೆ ಮೌಲ್ಯವೆಷ್ಟು ;